## ಶ್ರೀನಿವಾಸಕಲ್ಯಾಣ ಸುಳ್ಳುಕಥೆಯೇ?

"ಶ್ರೀನಿವಾಸಕಲ್ಯಾಣ ನಡೆದೇ ಇಲ್ಲ, ಅದು ಸ್ಥಳಪುರಾಣದವರ ಕಟ್ಟುಕಥೆ" ಬನ್ನಂಜೆ ಗೋವಿಂದಾಚಾರ್ಯರ ಉಪನ್ಯಾಸಗಳನ್ನು ಕೇಳಿ ಮಧ್ವಶಾಸ್ತ್ರದ ಜ್ಞಾನ ಪಡೆದಿದ್ದೇವೆ ಎಂದು ಬೀಗಿ ಓಡಾಡುವ ಬುದ್ಧಿಹೀನ ಮಂದಿಯ ಬಡಬಡಿಕೆಯಿದು.

**ಶ್ರೀಮತೀ ವಿಜಯಲಕ್ಷ್ಮಿಯವರು ಒಂದು ಪ್ರಶ್ನೆ ಕೇಳಿದ್ದಾರೆ — ಬನ್ನಂಜೆಯವರು ಶ್ರೀನಿವಾಸಕಲ್ಯಾಣ ನಿಜವಾಗಿ ನಡೆದ ಘಟನೆಯೇ ಅಲ್ಲ ಎಂದು ಹೇಳುತ್ತಾರೆ, ಇದು ಸರಿಯೇ ಎಂದು.**

ಇದಕ್ಕೆ ಉತ್ತರವಾಗಿ  ಒಂದು ವಸ್ತುನಿಷ್ಠ ಚರ್ಚೆಯನ್ನು ನಿಮ್ಮ ಮುಂದಿಡುತ್ತೇನೆ. ನಿಧಾನವಾಗಿ ಓದಿ. ಶ್ರೀಮದಾಚಾರ್ಯರ ಎರಡು ವಾಕ್ಯಗಳಿಂದ ಶ್ರೀನಿವಾಸಕಲ್ಯಾಣದ ಪ್ರಾಮಾಣ್ಯ ಹೇಗೆ ಸಿದ್ಧವಾಗುತ್ತದೆ ಎನ್ನುವದನ್ನು ಗಮನಿಸಿ, ಬನ್ನಂಜೆಗೆ ಸೂರ್ಯಪ್ರಕಾಶದಷ್ಟು ಸ್ಪಷ್ಟವಾಗಿರುವ ವಿಷಯವನ್ನೂ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವಿಲ್ಲ ಎನ್ನುವದನ್ನು ನೀವೇ ಮನಗಾಣಿ.

ಮೊದಲಿಗೆ, ಶ್ರೀ ಶ್ರೀಪಾದರಾಜರಿಂದ ಹಿಡಿದು ಶ್ರೀ ಜಗನ್ನಾಥದಾಸರವರೆಗಿನ ಎಲ್ಲ ಮಹಾನುಭಾವರೂ ಶ್ರೀನಿವಾಸಕಲ್ಯಾಣದ ಘಟನೆಯನ್ನು ಉಲ್ಲೇಖ ಮಾಡಿದ್ದಾರೆ. ಸೊಗಸಾಗಿ ತಮ್ಮ ಕೃತಿಗಳಲ್ಲಿ ವರ್ಣಿಸಿದ್ದಾರೆ. ನಮ್ಮ ದಾಸಸಾಹಿತ್ಯದ ಮಾತು, ಆ ಬನ್ನಂಜೆಗೆ ಮತ್ತು ಅವರ ಗೋಣಾಡಿಸುವ ಅಭಿಮಾನಿಗಳಿಗೆ ಪ್ರಮಾಣವೇ ಅಲ್ಲ. “ದಾಸರು ಹೇಳಿದ್ದಾರೆ, ಆದರೆ ಶ್ರೀಮದಾಚಾರ್ಯರು ಹೇಳಿಲ್ಲ. ತಾತ್ಪರ್ಯನಿರ್ಣಯದಲ್ಲಿ ಶ್ರೀಮದಾಚಾರ್ಯರು ಕಲಿಯುಗದಲ್ಲಿ ಪಾಂಡವರ ರಾಜ್ಯಭಾರದ ನಂತರ ತಮ್ಮ ಅವತಾರದವರೆಗಿನ ಘಟನೆಗಳನ್ನು ಹೇಳಿದ್ದಾರೆ, ಪುರಾಣದ ಪ್ರಕಾರ ಶ್ರೀನಿವಾಸ

ಕಲ್ಯಾಣ ನಡೆದದ್ದು ಕಲಿಯುಗದ ಮೊದಲ ಒಂದು ಸಾವಿರ ವರ್ಷದಲ್ಲಿ. ಹೀಗಾಗಿ ಅಂತಹ ದೊಡ್ಡ ಘಟನೆಯನ್ನು ಶ್ರೀಮದಾಚಾರ್ಯರು ಉಲ್ಲೇಖಿಸಿಯೇ ಇಲ್ಲ. ಹೀಗಾಗಿ ಆಚಾರ್ಯರ ಅನುಲ್ಲೇಖವೇ ಶ್ರೀನಿವಾಸ ಕಲ್ಯಾಣ ನಡೆದಿಲ್ಲ ಎನ್ನುವದನ್ನು ತೋರಿಸುತ್ತದೆ" ಎನ್ನುವದು ಅವರ ಅಭಿಪ್ರಾಯ.

ದಡ್ಡತನದ ಪರಮಾವಧಿ.

ಮೊದಲಿಗೆ ಶ್ರೀಮದಾಚಾರ್ಯರು ಕಥೆ ಹೇಳಲು ಕುಳಿತ ಪುರಾಣೀಕರಲ್ಲ. ಸಮಗ್ರ ಶಾಸ್ತ್ರಪ್ರಪಂಚದಲ್ಲಿ ಇರುವ ಸಮಸ್ಯೆಗಳನ್ನು ಪರಿಹರಿಸಲು ಕುಳಿತ ತತ್ವಾಚಾರ್ಯರು. ಎಲ್ಲಿ ಸಮಸ್ಯೆಯಿದೆಯೋ ಆದನ್ನು ಮಾತ್ರ ಉಲ್ಲೇಖಿಸಿ ಆಚಾರ್ಯರು ನಿರ್ಣಯಿಸುತ್ತಾರೆ.

ಸ್ವಯಂ ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ ಒಂದು ಮಾತನ್ನು ಹೇಳುತ್ತಾರೆ -

"**ಸಮಸ್ತಶಾಸ್ತ್ರಾರ್ಥವಿನಿರ್ಣಯೋಽಯಂ**

**ವಿಶೇಷತೋ ಭಾರತವರ್ತ್ಮಚಾರೀ”** ಎಂದು ನನ್ನ ಈ ಗ್ರಂಥ ಮಹಾಭಾರತದ ಕಥೆಯನ್ನು ನಿರ್ಣಯಿಸುತ್ತ ಸಮಸ್ತಶಬ್ದವಾಙ್ಮಯದ ಅರ್ಥವನ್ನು ನಿರ್ಣಯಿಸುತ್ತದೆ ಎಂದು.

ಆಚಾರ್ಯರ ತಾತ್ಪರ್ಯನಿರ್ಣಯದಲ್ಲಿ ಶ್ರೀನಿವಾಸಕಲ್ಯಾಣದ ನಡೆದಿದೆಯೋ ಇಲ್ಲವೋ ಎನ್ನುವದರ ನಿರ್ಣಯವೂ ಇದೆ.

ತಾತ್ಪರ್ಯನಿರ್ಣಯದ 32ನೆಯ ಅಧ್ಯಾಯದ 22ನೆಯ ಶ್ಲೋಕ. (ಬನ್ನಂಜೆಯ ಪ್ರಾಚೀನ ಸಂಶೋಧನೆಯಲ್ಲಿ 22ನೆಯ ಶ್ಲೋಕ, ಅರ್ವಾಚೀನ ಸಂಶೋಧನಯಲ್ಲಿ 23ನೆಯ ಶ್ಲೋಕ)

> **“ಪಾದಪ್ರಹಾರದೋಷೇಣ**
> **ತಂ ಭೃಗುಂ ವ್ಯಾಧತಾಂ ಗತಮ್”**

ಪರಮಾತ್ಮನನ್ನು ಕಾಲಿನಿಂದ ಒದ್ದ ಕಾರಣಕ್ಕಾಗಿ ಭೃಗುವಿಗೆ ವ್ಯಾಧಜನ್ಮ ಬಂದಿತ್ತು ಎಂದು ಆಚಾರ್ಯರು ಇಲ್ಲಿ ನಿರ್ಣಯಿಸಿದ್ದಾರೆ.

ಈಗ ಹೇಳಿ, ನೀವೆಲ್ಲ ಶ್ರೀನಿವಾಸಕಲ್ಯಾಣದ ಕಥೆಯನ್ನು ಕೇಳಿದ್ದೀರಿ ತಾನೇ? ಶ್ರೀನಿವಾಸಕಲ್ಯಾಣದ ಆರಂಭ ಹೇಗಾಗುತ್ತದೆ ? ಸರಸ್ವತೀನದಿಯ ತೀರದಲ್ಲಿ ಎಲ್ಲ ಋಷಿಗಳೂ ಯಜ್ಞ ಮಾಡುತ್ತಿರುತ್ತಾರೆ, ನಾರದರು ಬಂದು ಯಾರು ಸರ್ವೋತ್ತಮ ಎಂದು ಪ್ರಶ್ನೆ ಮಾಡುತ್ತಾರೆ, ಸಕಲವನ್ನೂ ತಿಳಿದ ಆ ಋಷಿಗಳು ಕಲಿಯುಗದ ಜನರಿಗೆ ಪರಮಾತ್ಮನ ಮಾಹಾತ್ಮ್ಯವನ್ನು ತೋರಲೋಸುಗ ವಿವಾದವನ್ನು ಮಾಡುತ್ತಾರೆ, ತಮ್ಮ ವಿವಾದದ ನಿರ್ಣಯವನ್ನು ಮಾಡಲು ಭೃಗುಋಷಿಗಳನ್ನು ಪ್ರಾರ್ಥಿಸುತ್ತಾರೆ, ಭೃಗುಋಷಿಗಳು ತ್ರಿಮೂರ್ತಿಗಳ ಲೋಕಕ್ಕೆ ಹೋಗಿ ಅವರನ್ನು ಕಂಡು ಬಂದು ಹರಿಯೇ ಸರ್ವೋತ್ತಮ ಎಂದು ನಿರ್ಣಯಿಸುತ್ತಾರೆ. ಆ ಸಂದರ್ಭದಲ್ಲಿ ವೈಕುಂಠಕ್ಕೆ ಹೋದಾಗ ಕಣ್ಣು ಮುಚ್ಚಿ ಮಲಗಿದ್ದ ಪರಮಾತ್ಮನ ಎದೆಗೆ ಒದೆಯುತ್ತಾರೆ. ಪರಮಾತ್ಮ ಥಟ್ಟನೇ ಎದ್ದವನ ಹಾಗೆ ನಟಿಸಿ ಲಕ್ಷ್ಮೀಸಮೇತನಾಗಿ ಅವರ ಕಾಲನ್ನು ತೊಳೆಯುತ್ತಾನೆ. ಆ ನಂತರ ಲಕ್ಷ್ಮೀದೇವಿ ಪ್ರೇಮಕಲಹವನ್ನು ಮಾಡಿ ತಾನು ವೈಕುಂಠವನ್ನು

ತೊರೆದವಳಂತೆ ಮಾಡಿ ಭೂಮಿಯಲ್ಲಿ ಕೊಲ್ಹಾಪುರದಲ್ಲಿ ನೆಲೆಗೊಳ್ಳುತ್ತಾಳೆ. ಪರಮಾತ್ಮನೂ ಕೆಳಗಿಳಿದು ಬರುತ್ತಾನೆ. ಹತ್ತುಸಾವಿರವರ್ಷಗಳ ನಂತರ ಶ್ರೀನಿವಾಸಕಲ್ಯಾಣ ಜರುಗುತ್ತದೆ.

ಇದಿಷ್ಟು ಘಟನೆಯನ್ನು ನಾವು ಕೇಳಿದ್ದೇವೆ. ಭೃಗುಋಷಿಗಳು ಕಾಲಲ್ಲಿ ಒದ್ದಿದ್ದರಿಂದಲೇ ವ್ಯಾಧನಾಗಿ ಹುಟ್ಟಿದರು ಎನ್ನುವದನ್ನು ಆಚಾರ್ಯರು ನಿರ್ಣಯಸಿದ್ದರಿಂದ ಇಡಿಯ ಕಥೆಗೆ ಪ್ರಾಮಾಣ್ಯ ಒದಗಿಬರುವದಿಲ್ಲವೇ?

ಇಲ್ಲ, ಆಚಾರ್ಯರು ಕೇವಲ ಭೃಗುವಿನ ಘಟನೆಯನ್ನು ಮಾತ್ರ ಹೇಳಿದ್ದಾರೆ. ಪೂರ್ಣ ಹೇಳಿಲ್ಲ. ಕೇವಲ ಇದೊಂದರಿಂದ ಶ್ರೀನಿವಾಸಕಲ್ಯಾಣ ನಡೆದಿದೆ ಎನ್ನಲಾಗುವದಿಲ್ಲ ಎನ್ನುವದಕ್ಕೆ ಉತ್ತರ ಹೀಗಿದೆ —

ಹಿಂದೆ ಹೇಳಿದಂತೆ ಆಚಾರ್ಯರು ಕೇವಲ ಕಥೆ ಹೇಳುವ ಪುರಾಣೀಕರಲ್ಲ, ಕಥೆಗಳಲ್ಲಿ ವಿರೋಧ ತೋರಿದಾಗ ನಿರ್ಣಯಿಸುವ ತತ್ವಾಚಾರ್ಯರು.

ಇಲ್ಲಿ ವಿರೋಧವಿದೆ, ಭೃಗುಋಷಿಗಳು ಪರಮಾತ್ಮನನ್ನು ಒದ್ದದ್ದರಿಂದ, ರುದ್ರದೇವರಿಗೆ, ಬ್ರಹ್ಮದೇವರಿಗೆ ಶಾಪ ಕೊಟ್ಟದ್ದರಿಂದ ಅವರಿಗೆ ಪಾಪ ಬರಲಿಲ್ಲವೇ ಎಂದು. ಅವರು ಅಪರೋಕ್ಷಜ್ಞಾನಿಗಳು ಮತ್ತು ಋಷಿಗಳಿಗೆ ತತ್ವವನ್ನು ತಿಳಿಸಲು ಹಾಗೆ ಮಾಡುತ್ತಿದ್ದಾರೆ ಆದ್ದರಿಂದ, ಅದು ವಿಡಂಬನೆಯಿರಬಹುದು. ಹೀಗಾಗಿ ಭೃಗುವಿಗೆ ಪಾಪ ಬಂದಿತೇ ಇಲ್ಲವೇ ಎಂದು ಸಂಶಯ ತಲೆದೋರಿದಾಗ ಆಚಾರ್ಯರು ನಿರ್ಣಯಿಸಿದರು ಭೃಗುವಿಗೆ ಪಾಪ ಬಂದಿತು, ಪಾಪದ ಫಲವೂ ಒದಗಿತು ಎಂದು.

ಶ್ರೀಮದಾಚಾರ್ಯರ ವಾಕ್ಯಗಳೇ ಹಾಗೆ, ಇಡಿಯ ಕಥೆಯಲ್ಲಿನ ಒಂದು ಮಹತ್ತ್ವದ ಭಾಗವನ್ನು ತೆಗೆದು ಆಚಾರ್ಯರು ನಿರ್ಣಯಿಸಿಬಿಡುತ್ತಾರೆ, ಅದರಿಂದ ಎಲ್ಲ ಪ್ರಶ್ನೆಗಳಿಗೂ  ಉತ್ತರ ದೊರೆತುಬಿಡುತ್ತವೆ. ನಾವು ಪುರಾಣದಲ್ಲಿ ರುಕ್ಮಾಂಗದನ ಕಥೆಯನ್ನು ಕೇಳುತ್ತೇವೆ. ಪರಮಾತ್ಮನೇ ಸ್ವಯಂ ಮೋಹಿನಿಯ ರೂಪದಲ್ಲಿ ಬಂದು ಅವನ ಏಕಾದಶೀನಿಷ್ಠೆಯನ್ನು ಪರೀಕ್ಷಿಸುತ್ತಾನೆ. ದೇವರು ಒಬ್ಬ ರಾಜನ ಬಳಿ ಬಂದು ಈ ರೀತಿಯ ಲೀಲೆ ತೋರಲು ಸಾಧ್ಯವೇ

ಎಂಬ ಪ್ರಶ್ನೆಗೆ ಆಚಾರ್ಯರು ತಾತ್ಪರ್ಯನಿರ್ಣಯದ 12ನೆಯ ಅಧ್ಯಾಯದ ಕುಂತಿಯ ಪ್ರಸಂಗದ ಒಂದು ಉಲ್ಲೇಖದಲ್ಲಿ ನಿರ್ಣಯ ನೀಡಿಬಿಡುತ್ತಾರೆ. ಇಡಿಯ ಘಟನೆಗೆ ತಮ್ಮ ಅಂಗೀಕಾರದ ಮುದ್ರೆಯನ್ನೊತ್ತುತ್ತಾರೆ. **"ಯಥೈವ ಧರ್ಮಭೂಷಣೋ ಜಗಾಮ ಸಂಧ್ಯಕಾಸುತಃ"** ಎಂದು.

ಹಾಗೆಯೇ, ಇಂದ್ರನಿಗೂ ಗರುಡನಿಗೂ ಯುದ್ಧ ನಡೆದು, ಇಂದ್ರ ವಜ್ರಾಯುಧವನ್ನು ಗರುಡನ ಮೇಲೆ ಪ್ರಯೋಗಿಸಿದರೆ ಅದು ನಿಷ್ಫಲವಾಯಿತು ಎನ್ನುವ ಘಟನೆಯನ್ನು ಪುರಾಣ ಮತ್ತು ಮಹಾಭಾರತಗಳಲ್ಲಿ ಕೇಳುತ್ತೇವೆ. ಇದು ಸತ್ಯವೇ? ಇಂದ್ರ ತನಗಿಂತ ಹಿರಿಯನಾದ ಗರುಡನಿಗೆ ಅಪಚಾರವೆಸಗಿದನೇ? ಸೋಲಿಲ್ಲದ ವಜ್ರಾಯುಧಕ್ಕೆ ಸೋಲಾಯಿತೇ? ಎಂಬ ಪ್ರಶ್ನೆಗಳಿಗೆ ಹೌದು ಎಂದು ಆಚಾರ್ಯರು ಉತ್ತರಿಸುತ್ತಾರೆ, **"ಯಥೈವ ವಜ್ರೋ ವಿಪತೌ ವೃಥಾಽಭವತ್"** ಎಂದು. ಇದರಿಂದ ಸಮಗ್ರ ಘಟನೆಯ ಪ್ರಾಮಾಣ್ಯ ಸಿದ್ಧವಾಗುತ್ತದೆ.

ಹೀಗೆ ಅಚಾರ್ಯರು 'ಸಮಸ್ತ' ಪೌರಾಣಿಕ ಘಟನೆಗಳನ್ನು ನಿರ್ಣಯಿಸುತ್ತಾರೆ. ಅರ್ಥ ಮಾಡಿಕೊಳ್ಳುವ ಯೋಗ್ಯತೆಯನ್ನು ನಮಗೆ ಗುರುಗಳು ಅನುಗ್ರಹಿಸಬೇಕಷ್ಟೇ.

ಹಾಗಲ್ಲ, ಭಾಗವತದ ಹತ್ತನೆಯ ಸ್ಕಂಧದ 93ನೆಯ ಅಧ್ಯಾಯದಲ್ಲಿ ಭೃಗುಗಳ ಕಥೆಯಿದೆ. ಅಲ್ಲೇನೂ ಶ್ರೀನಿವಾಸಕಲ್ಯಾಣದ ಘಟನೆಯಿಲ್ಲ. ಹೀಗಾಗಿ ಸರಸ್ವತಿಯ ತೀರದಲ್ಲಿ ನಡೆದ ಘಟನೆ ಭೃಗುಋಷಿ ಒದ್ದ ಘಟನೆಗಳು ಮಾತ್ರ ಸತ್ಯ. ಶ್ರೀನಿವಾಸಕಲ್ಯಾಣದ ಘಟನೆ ಸತ್ಯವಲ್ಲ ಎಂದು ದುರ್ವಾದಿಗಳು ವಾದಿಸಿದರೆ ಅದಕ್ಕೂ ಶ್ರೀಮದಾಚಾರ್ಯರ ತಾತ್ಪರ್ಯನಿರ್ಣಯ ಉತ್ತರ ನೀಡುತ್ತದೆ.

ಹದಿನಾರನೆಯ ಅಧ್ಯಾಯ ಇಪ್ಪತ್ತೊಂಭತ್ತನೆಯ ಶ್ಲೋಕ —

**"ಯಾಮಃ ಪುರಂ ಕರವೀರಾಖ್ಯಮೇವ ಮಹಾಲಕ್ಷ್ಮ್ಯಾಃ ಕ್ಷೇತ್ರಸಂದರ್ಶನಾಯ"**

ಶ್ರೀಕೃಷ್ಣ ಬಲರಾಮರು ಗೋಮಂತಪರ್ವತದಲ್ಲಿದ್ದುಕೊಂಡು ಜರಾಸಂಧನನ್ನು ಸೋಲಿಸಿ ಕಳುಹಿಸಿರುತ್ತಾರೆ. ಆಗ ದಮಘೋಷ ಬಂದು ತನ್ನ ಊರಾದ ಕೊಲ್ಹಾಪುರಕ್ಕೆ ಆಹ್ವಾನಿಸುತ್ತಾನೆ, ಆಗ ಮಹಾಲಕ್ಷ್ಮೀದೇವಿಯ ಕ್ಷೇತ್ರ ಎನ್ನುವದಕ್ಕಾಗಿ ಶ್ರೀಕೃಷ್ಣ ಬಲರಾಮರು ಕರವೀರಪುರಕ್ಕೆ ಬಂದು ಸೃಗಾಲವಾಸುದೇವನನ್ನು ಕೊಂದು ಮಹಾಲಕ್ಷ್ಮೀದೇವಿಯ ದರ್ಶನ ಪಡೆಯುತ್ತಾರೆ. ಇದು ಶ್ರೀಮದಾಚಾರ್ಯರ ನಿರ್ಣಯ.

ಈಗ ಹೇಳಿ, ಕೊಲ್ಹಾಪುರ ಮಹಾಲಕ್ಷ್ಮೀದೇವಿಯ ಕ್ಷೇತ್ರವಾದದ್ದು ಯಾವಾಗ? “ನನ್ನ ವಾಸಸ್ಥಳಕ್ಕೆ ಋಷಿ ಒದ್ದರೂ ಸುಮ್ಮನಿದ್ದೆ, ಆದ್ದರಿಂದ ನಾನು ಹೋಗುತ್ತೇನೆ” ಎಂದು ನಿತ್ಯಾವಿಯುಕ್ತಳಾದ ಮಹಾಲಕ್ಷ್ಮೀದೇವಿ ಪ್ರೇಮಕಲಹ ಮಾಡಿ ವೈಕುಂಠವನ್ನು ಬಿಟ್ಟು ಬಂದ ಬಳಿಕ ತಾನೇ? **ನಮ್ಮ ಶ್ರೀನಿವಾಸಕಲ್ಯಾಣದಲ್ಲಿಯೇ** ಈ ಮಾತಿರುವದು - **ಕರವೀರಪುರಂ ದಿವ್ಯಂ ಗಚ್ಛಾಮಿ ಗರುಡಧ್ವಜ, ರಮಾ ಜಗಾಮ ತತ್ ಕ್ಷೇತ್ರಂ ಕರವೀರಪುರಂ ಪ್ರತಿ,** ಎಂದು. ಅಂದಮೇಲೆ, ಲಕ್ಷ್ಮೀದೇವಿ

ಕೊಲ್ಹಾಪುರವನ್ನು ಕ್ಷೇತ್ರ ಮಾಡಿದ್ದನ್ನು ಆಚಾರ್ಯರು ನಿರ್ಣಯಿಸಿದರು. ಲಕ್ಷ್ಮೀದೇವಿ ಕೆಳಗೆ ಬಂದಳು ಎಂದು ಪರಮಾತ್ಮನೂ ಬಂದ, ಅವಳ ಹುಸಿಕೋಪವನ್ನು ತಣ್ಣಗಾಗಿಸಲು. ಪದ್ಮಾವತಿಯ ಮದುವೆಯ ಮುಖಾಂತರ ಅದನ್ನು ಪೂರೈಸಿ ಭಕ್ತರಿಗೆ ವರಪ್ರದನಾಗಿ ತಿಮ್ಮಪ್ಪನಾಗಿ ನಿಂತ ಎಂದು ಸಿದ್ಧವಾಗುವದಿಲ್ಲವೇ?

ಕರವೀರಪುರ ಮಹಾಲಕ್ಷ್ಮೀದೇವಿಯ ಕ್ಷೇತ್ರವಾದದ್ದು ಲಕ್ಷ್ಮೀದೇವಿ ಬಂದ ಬಳಿಕವೇ. ಹೀಗಾಗಿ ಈ ಕಥೆಯನ್ನು ನಿರ್ಣಯಿಸುತ್ತಿರುವ ಆಚಾರ್ಯರು ಸಮಗ್ರ ಕಥೆಗೆ ಅಂಗೀಕಾರದ ಮುದ್ರೆಯನ್ನೊತ್ತಿದರು ಎನ್ನುವದು ಸಿದ್ಧವಾಗುವದಿಲ್ಲವೇ?

ಮತ್ತೂ, ಹರಿವಂಶ ಮತ್ತು ಭಾಗವತಗಳಲ್ಲಿ ಪರಮಾತ್ಮ ಕೊಲ್ಹಾಪುರಕ್ಕೆ ಬಂದು ಹೋದ ಎಂಬ ಮಾತಿದೆಯೇ ಹೊರತು ಲಕ್ಷ್ಮೀದೇವಿಯ ಕ್ಷೇತ್ರಕ್ಕೆ ಬಂದು ಹೋದ ಎಂಬ ಮಾತಿಲ್ಲ. ಆದರೆ ಆಚಾರ್ಯರು ಅದನ್ನು ಮಹಾಲಕ್ಷ್ಮೀದೇವಿಯ ಕ್ಷೇತ್ರ ಎಂದೇ ಕರೆಯುತ್ತಿದ್ದಾರೆ. ಅಂದಮೇಲೆ, ಹರಿವಂಶ

ಭಾಗವತಗಳಲ್ಲಿ ಹೇಳಿಲ್ಲದ ಘಟನೆಯನ್ನು ಭವಿಷ್ಯೋತ್ತರ ಮುಂತಾದ ಪುರಾಣಗಳಿಂದ ತಿಳಿಯಿರಿ ಎಂದು ಆದೇಶಿಸುತ್ತಿದ್ದಾರೆ ಎನ್ನುವದು ಸ್ಪಷ್ಟವಲ್ಲವೇ ?

ಮತ್ತೂ, ಇಲ್ಲಿ ಮಹಾಲಕ್ಷ್ಮಿ ಎಂಬ ಶಬ್ದವನ್ನು ಪ್ರಯೋಗಿಸಲೂ ಸಹ ಆಚಾರ್ಯರಿಗೆ ಕಾರಣವಿದೆ. ಈ ಕಥೆಯನ್ನು ಹೇಳುವಾಗ ಭವಿಷ್ಯೋತ್ತರಪುರಾಣದಲ್ಲಿ ವೇದವ್ಯಾಸದೇವರೂ ಸಹ **ಯದಾ ಗತಾ ಮಹಾಲಕ್ಷ್ಮೀಸ್ತದಾ ನಾರಾಯಣೋ ಹರಿಃ** ಎಂದು ಮಹಾಲಕ್ಷ್ಮೀಶಬ್ದವನ್ನೇ ಬಳಸಿದ್ದಾರೆ. ಆಚಾರ್ಯರು ಅದನ್ನು ಅನುಸರಿಸಿ ಮಹಾಲಕ್ಷ್ಮಿ ಎಂದೇ ಬಳಸಿದ್ದಾರೆ. ಆಚಾರ್ಯರು ಈ ರೀತಿಯಾಗಿ ವೇದವ್ಯಾಸದೇವರನ್ನು ಶಬ್ದಶಃ ಅನುಸರಿಸುತ್ತಾರೆ ಎನ್ನುವದನ್ನು ಶ್ರೀವಾದಿರಾಜರು ತಮ್ಮ ವ್ಯಾಖ್ಯಾನದಲ್ಲಿ ಹತ್ತಾರು ಕಡೆಯಲ್ಲಿ ತೋರಿಸಿಕೊಟ್ಟಿದ್ದಾರೆ.

ಇದೆಲ್ಲ ಸರಿ. ಪರಮಾತ್ಮ ಕೆಳಗಿಳಿದು ಬಂದ ಬಳಿಕ ಹುತ್ತದಲ್ಲಿ ಹತ್ತುಸಾವಿರ ವರ್ಷ ಇದ್ದ ಎನ್ನುತ್ತಾರೆ.

ಆದರೆ ಕಲಿಯುಗದಲ್ಲಿ ಇನ್ನೂ ಐದೇ ಸಾವಿರ ವರ್ಷಗಳು ಕಳೆದಿರುವದು ಅಂದ ಮೇಲೆ ನಿಮ್ಮ ಪ್ರಕಾರ ಇನ್ನೂ ಶ್ರೀನಿವಾಸಕಲ್ಯಾಣದ ಘಟನೆಯೇ ನಡೆದಿಲ್ಲ, ವೇಂಕಟೇಶ ತಿರುಪತಿಯಲ್ಲಿ ಹೇಗೆ ಬರಲು ಸಾಧ್ಯ ? ( ಈ ಪ್ರಶ್ನೆಯನ್ನು ಬನ್ನಂಜೆಯ ಮುಂದೆ ಯಾವಾಗಲೂ ಗೋಣಾಡಿಸುವ ಒಬ್ಬ ವ್ಯಕ್ತಿ ಕೇಳಿದರು ಎಂದು ಒಬ್ಬ ವಿದ್ಯಾರ್ಥಿ ನನಗೆ ತಿಳಿಸಿದ್ದಾನೆ)

ತಲೆಯಲ್ಲಿ ಬುದ್ಧಿ ಎನ್ನುವ ವಸ್ತು ಇರುವ ವ್ಯಕ್ತಿ ಹೀಗೆ ಮಾತನಾಡುವದಿಲ್ಲ. ಗ್ರಂಥಗಳನ್ನು ಅಧ್ಯಯನ ಮಾಡಿದವರಂತೂ ಸರ್ವಥಾ ಮಾತನಾಡುವದಿಲ್ಲ.

ನೋಡಿ. ಶ್ರೀಮದಾಚಾರ್ಯರು ಸ್ಪಷ್ಟವಾಗಿ ಶ್ರೀಕೃಷ್ಣ ಲಕ್ಷ್ಮೀದೇವಿಯ ಕ್ಷೇತ್ರವನ್ನು ದರ್ಶನ ಮಾಡಿದ ಎನ್ನುತ್ತಾರೆ. ಅಂದಮೇಲೆ ಮೇಲೆ ಹೇಳಿದ ಭೃಗುಋಷಿಗಳ ಘಟನೆ ಶ್ರೀಕೃಷ್ಣನ ಅವತಾರಕ್ಕಿಂತಲೂ ಮುಂಚೆ ನಡೆದದ್ದು ಎನ್ನುವದು ಸಿದ್ಧವಾಯಿತು ತಾನೇ? ಭವಿಷ್ಯೋತ್ತರ ಪುರಾಣ, ಪರಮಾತ್ಮ ಹತ್ತುಸಾವಿರವರ್ಷಗಳ ಹುತ್ತದಲ್ಲಿದ್ದ ಮತ್ತು ಕಲಿಯುಗದ ಮೊದಲ ಒಂದು ಸಾವಿರ

ವರ್ಷಗಳಲ್ಲಿ ಶ್ರೀನಿವಾಸಕಲ್ಯಾಣದ ಘಟನೆ ನಡೆಯಿತು ಎನ್ನುತ್ತದೆ. ಆಚಾರ್ಯರು ಶ್ರೀಕೃಷ್ಣ ಲಕ್ಷ್ಮೀಕ್ಷೇತ್ರಕ್ಕೆ ಭೇಟಿ ನೀಡಿದ ಎನ್ನುತ್ತಾರೆ ಮತ್ತು ಪರಮಾತ್ಮನನ್ನು ಒದ್ದದ್ದಕ್ಕಾಗಿ ಭೃಗುಋಷಿ ವ್ಯಾಧನಾಗಿ ಹುಟ್ಟಿದರು ಎನ್ನುತ್ತಾರೆ. ಅಂದ ಮೇಲೆ ಶ್ರೀಕೃಷ್ಣನ ಅವತಾರಕ್ಕಿಂತಲೂ ಸುಮಾರು ಒಂಭತ್ತು ಸಾವಿರ ವರ್ಷಗಳ ಮುಂಚೆ ಅಂದರೆ ದ್ವಾಪರದ ಅಂತ್ಯದಲ್ಲಿ ಕಾಲಿಗೆ ಒದ್ದ ಘಟನೆ ನಡೆಯಿತು ಎನ್ನುವದು ಸಿದ್ಧವಾಯಿತು. ಸ್ವಯಂ ಶ್ರೀನಿವಾಸಕಲ್ಯಾಣದಲ್ಲಿಯೇ ಈ ಮಾತಿದೆ- ಅಷ್ಟಾವಿಂಶತಿಮೇ ಪ್ರಾಪ್ತೇ ದ್ವಾಪರಾಂತೇ ಎಂದು.

**ಇಷ್ಟು ಸರಳ ವಿಷಯವನ್ನು ಅರ್ಥ ಮಾಡಿಕೊಳ್ಳಲಿಕ್ಕಾಗದ ಬನ್ನಂಜೆ ಹೇಳುತ್ತಾರೆ — ನಿಮ್ಮ ಜನ್ಮದಲ್ಲಿ ಓದಲಿಕ್ಕೆ ಸಾಧ್ಯವಿಲ್ಲದ್ದನ್ನು ನಾನು ಓದಿದ್ದೇನೆ ಎಂದು.** ಬನ್ನಂಜೆಯ ಬಡಾಯಿಯನ್ನು ಕೇಳಿ ತಿಳುವಳಿಕೆಯುಳ್ಳ ಮಂದಿ ಮೀಸೆಯಡಿಯಲ್ಲಿ ನಗುತ್ತಾರೆ.

ಮತ್ತೂ, ಇಲ್ಲಿಯೂ ಶ್ರೀಮದಾಚಾರ್ಯರ ಸಿದ್ಧಾಂತವಿದೆ. ಒಬ್ಬನೇ ದೇವತೆ ಎರಡು

ರೂಪದಿಂದ ಅವತಾರ ಮಾಡಿದಾಗ ಒಂದು ರೂಪದ ಮತ್ತೊಂದು ರೂಪದಲ್ಲಿ ಐಕ್ಯವನ್ನು ಹೊಂದಬಹುದು ಎಂದು ಆಚಾರ್ಯರು ಪ್ರತಿಪಾದಿಸುತ್ತಾರೆ. ಅದಕ್ಕಾಗಿಯೇ ಯಮಧರ್ಮನ ಅವತಾರನಾದ ವಿದುರ ಯಮಧರ್ಮನ ಮತ್ತೊಂದು ರೂಪವಾದ ಯುಧಿಷ್ಠಿರನಲ್ಲಿ ಐಕ್ಯವನ್ನು ಹೊಂದುತ್ತಾನೆ. ಹಾಗೆಯೇ ಪರಮಾತ್ಮ ಮಡದಿಯಾದ ನೀಲಾದೇವಿಯೂ ಎರಡು ರೂಪದಲ್ಲಿ ಅವತರಿಸಿರುತ್ತಾಳೆ. ಮೊದಲ ರೂಪ ಎರಡನೆಯ ರೂಪದಲ್ಲಿ ಐಕ್ಯವನ್ನು ಹೊಂದುತ್ತದೆ. ಹಾಗೆಯೆ ವೈಕುಂಠದಿಂದ ಕೆಳಗಿಳಿದು ಬಂದ ಭಗವಂತ ಮುಂದೆ ಮದುವೆಯ ಸಂದರ್ಭದಲ್ಲಿ ವಸುದೇವ ದೇವಕಿಯರು ಅಪ್ಪ ಅಮ್ಮ ಸುಭದ್ರೆ ಬಲರಾಮರು ಅಣ್ಣತಂಗಿಯರು ಪಾಂಡವರು ಬಾಂಧವರು ಎಂದು ಹೇಳುತ್ತಾನೆ. ಅಂದರೆ ಶ್ರೀಕೃಷ್ಣನ ಅವತಾರಕ್ಕಿಂತಲೂ 9 ಸಾವಿರ ವರ್ಷಗಳು ಮೊದಲಿಗೆ ಅವತರಿಸಿದ್ದ ಶ್ರೀನಿವಾಸ ರೂಪ ಶ್ರೀಕೃಷ್ಣನೊಡನೆ ಐಕ್ಯವನ್ನು ಹೊಂದಿ ಶ್ರೀಕೃಷ್ಣನಾಗಿಯೇ ವ್ಯವಹರಿಸುತ್ತಾನೆ.

ಇದೆಲ್ಲ ಸರಿ, ಶ್ರೀಮದಾಚಾರ್ಯರು ಶ್ರೀನಿವಾಸಕಲ್ಯಾಣದ ಘಟನೆಯನ್ನು ಕಂಠತಃ ಹೇಳಿಲ್ಲವಲ್ಲ ಎಂದರೆ ಆಚಾರ್ಯರು, ತ್ರಿಪುರಾಸುರರನ್ನು ರುದ್ರದೇವರು ಕೊಂದ ಘಟನೆಯನ್ನೂ ವಿಸ್ತಾರವಾಗಿ ಹೇಳಿಲ್ಲ. **ತ್ರಿಪುರಂ ಘ್ನತಾ** ಎಂದಷ್ಟೇ ಹೇಳಿದ್ದಾರೆ. ಹಾಗಾದರೆ, ತ್ರಿಪುರಾಸುರರು, ಅವರ ತಪಸ್ಸು, ಅವರು ನೀಡಿದ ಉಪಟಳ, ರುದ್ರದೇವರ ಯುದ್ಧದ ಸಿದ್ಧತೆ ದೇವತೆಗಳು ರುದ್ರದೇವರಿಗೆ ಮಾಡಿದ ಸೇವೆ ಇವೆಲ್ಲವೂ ಸುಳ್ಳಾ? ಶ್ರೀಮದಾಚಾರ್ಯರು ಹೇಳಿಲ್ಲವಲ್ಲ?

ಗಿರಿಜಾಕಲ್ಯಾಣದ ಕಥೆಯನ್ನೂ ಶ್ರೀಮದಾಚಾರ್ಯರು ಹೇಳಿಲ್ಲ. ಭಗೀರಥನ ಕಥೆಯನ್ನೂ ಹೇಳಿಲ್ಲ, ನಳ ದಮಂಯತಿಯರ ಕಥೆಯನ್ನೂ ಹೇಳಿಲ್ಲ, ದತ್ತಾತ್ರೇಯರೂಪದ ಸಮಗ್ರ ಕಥೆಯನ್ನೂ ಹೇಳಿಲ್ಲ, ಪರಶುರಾಮದೇವರ ಪತ್ನಿ ಹರಿಣೀ ಎನ್ನುವದನ್ನೂ ಹೇಳಿಲ್ಲ, ಹೀಗೆ ಸಾವಿರಾರು ಘಟನೆಗಳು ಕಂಠತಃ ಅನುಕ್ತ. ಏಕೆಂದರೆ ಅಲ್ಲಿ ವಿವಾದವಿಲ್ಲ. ಕೆಲವೆಡೆ ವಿವಾದವಿದ್ದರೂ ಆಚಾರ್ಯರ ಉಳಿದ ನಿರ್ಣಯಗಳಿಂದ ಅವನ್ನು

ನಿರ್ಣಯಿಸಲು ಬರುತ್ತವೆ. ಎಲ್ಲಿ ನಮಗೆ ನಿರ್ಣಯಿಸಲು ಸಾಧ್ಯವಿಲ್ಲ ಅಂತಹುವನ್ನು ಮಾತ್ರ ಆಚಾರ್ಯರು ತಿಳಿಸುತ್ತಾರೆ.

ಅಷ್ಟು ಯಾಕೆ, ಆಚಾರ್ಯರು ತಾವು ಶ್ರೀಕೃಷ್ಣನ ಪ್ರತಿಷ್ಠಾಪನೆ ಮಾಡಿದ್ದೇನೆ ಎಂದು ಎಲ್ಲಿಯೂ ಹೇಳಿಲ್ಲ, ಹೀಗಾಗಿ ಶ್ರೀಕೃಷ್ಣನನ್ನು ಆಚಾರ್ಯರು ಉಡುಪಿಯಲ್ಲಿ ಪ್ರತಿಷ್ಠಾಪಿಸಿಯೇ ಇಲ್ಲ ಎಂದು ಬನ್ನಂಜೆಯಂತಹ ಮತ್ತೊಬ್ಬ  ದುರ್ವಾದಿ ಪ್ರಶ್ನೆ ಮಾಡಿದರೆ ಏನುತ್ತರ ನೀಡುತ್ತೇವೆ?  ಜ್ಞಾನಿಗಳಾದ ಶ್ರೀನಾರಾಯಣಪಂಡಿತಾಚಾರ್ಯರು ಮಧ್ವವಿಜಯದಲ್ಲಿ ಹೇಳಿದ್ದಾರೆ, ಆದ್ದರಿಂದ ಅದು ಆಚಾರ್ಯರ ಪ್ರತಿಷ್ಠೆ ಎನ್ನುವದರಲ್ಲಿ ಸಂಶಯವೇ ಇಲ್ಲ ಎಂದು. ಅಂದಮೇಲೆ, ಮಹಾಜ್ಞಾನಿಗಳಾದ ಶ್ರೀ ವಾದಿರಾಜರ ತೀರ್ಥಪ್ರಬಂಧದ ವಾಕ್ಯಗಳು, ಅವರ ಹಾಡುಗಳು ಶ್ರೀನಿವಾಸಕಲ್ಯಾಣಕ್ಕೆ ಯಾಕಾಗಿ ಪ್ರಮಾಣವಾಗುವದಿಲ್ಲ? ಶ್ರೀ ಚಂದ್ರಿಕಾಚಾರ್ಯರಾದಿಯಾಗಿ ದಾಸಸಾಹಿತ್ಯದ ವಾಕ್ಯಗಳು ಯಾಕಾಗಿ ಪ್ರಮಾಣವಲ್ಲ?

ಆಚಾರ್ಯರು ತಮ್ಮ ಅನುವ್ಯಾಖ್ಯಾನದಲ್ಲಿ ಒಂದು ಮಹತ್ತ್ವದ ಮಾತನ್ನು ಹೇಳುತ್ತಾರೆ — **ಸುಯುಕ್ತಯಃ ತಮೋ ಹನ್ಯುಃ ಈಶಾನುಗ್ರಹಯೋಗಿನಾಮ್** ಎಂದು. ಅಂದರೆ, ಪರಮಾತ್ಮನ ಮತ್ತು ಗುರುಗಳ ಅನುಗ್ರಹವಿದ್ದವರಿಗೆ ಮಾತ್ರ ಆಚಾರ್ಯರ ಗ್ರಂಥದಿಂದ ಅಜ್ಞಾನ ನಾಶವಾಗಲು ಸಾಧ್ಯ, ತತ್ತ್ವಜ್ಞಾನ ದೊರೆಯಲು ಸಾಧ್ಯ.

**ಸಮಸ್ತಗುರುಗಳಾದ ಶ್ರೀಮದಾಚಾರ್ಯರನ್ನೇ ಆಚಾರ್ಯಮಧ್ವ ಎಂದು ದುರಹಂಕಾರದಿಂದ ಉಲ್ಲೇಖ ಮಾಡುವ ದುರ್ವಾದಿಗಳಿಗೆ ತತ್ತ್ವಜ್ಞಾನ ಹೇಗೆ ತಾನೇ ಉದಿಸಲು ಸಾಧ್ಯ ?**

ಅಂತಹ ದುರ್ವಾದಿಗಳ ಮಾತನ್ನು ಕೇಳಿ ತಮ್ಮನ್ನು ತಾವು ತಿಳಿದವರು ಎಂದು ಕರೆದುಕೊಳ್ಳುವವರು ಮಾಧ್ವರು ಹೇಗಾಗಲು ಸಾಧ್ಯ? ಉಪನಿಷತ್ತಿನಲ್ಲಿ ಒಂದು ಮಾತಿದೆ — **ಅಂಧೇನೈವ ನೀಯಮಾನಾ ಯಥಾಽಂಧಾಃ** ಎಂದು. ಒಬ್ಬ ಕುರುಡ ತನ್ನಂತಹ ನೂರು ಕುರುಡರಿಗೆ ದಾರಿ ತೋರಿಸಿದಂತೆ ಎಂದು. ಇಷ್ಟು ಸ್ಪಷ್ಟವಾಗಿರುವ ವಿಷಯವನ್ನು ಕಾಣುವ

ಸಾಮರ್ಥ್ಯವಿಲ್ಲದ ಬನ್ನಂಜೆ ಕುರುಡ ಎನ್ನುವದು ಸಿದ್ಧ ತಾನೇ? ಇಂಥ ಕುರುಡ ದುರ್ವಾದಿ ಹೇಳಿದ ಮಾತನ್ನು ನಂಬಿ ಶ್ರೀನಿವಾಸಕಲ್ಯಾಣವನ್ನು ಜರಿಯುವ, ಕೃಷ್ಣಾಷ್ಟಮಿಯಂದು ಅನ್ನ ಉಣ್ಣುವ, ನಮ್ಮ ಗುರುಗಳಾದ ಶ್ರೀಮದಾಚಾರ್ಯರನ್ನು ಆಚಾರ್ಯಮಧ್ವ ಎಂದು ಅಗೌರವದಿಂದ ಕರೆಯುವ ಮಂದಿಯೂ ಕುರುಡರೇ ತಾನೇ? ಉಪನಿಷತ್ತು ಹೇಳುವ ಎಲ್ಲ ಲಕ್ಷಣವೂ ಅವರಿಲ್ಲದೆ — **ಸ್ವಯಂ ಧೀರಾಃ ಪಂಡಿತಂಮನ್ಯಮಾನಾಃ**, ಅಂತಹವರು ತಮ್ಮನ್ನು ತಾವೇ ಪಂಡಿತರು ಎಂದು ಕರೆದುಕೊಳ್ಳುತ್ತಾರೆ ಎಂದು.

**ಬನ್ನಂಜೆ ತನ್ನ ಉಪನ್ಯಾಸಗಳಲ್ಲಿ ತನ್ನನ್ನು ತಾನು ವಿಪರೀತವಾಗಿ ಹೊಗಳಿಕೊಳ್ಳುವದು,**

**“ಬನ್ನಂಜೆ ನೀವು ಓದಿರುವದನ್ನೂ ಓದಿದ್ದಾನೆ, ಓದದೇ ಇರುವದನ್ನೂ ಓದಿದ್ದಾನೆ”**

**“ನಿಮ್ಮ ಜನ್ಮದಲ್ಲಿ ಓದಲು ಸಾಧ್ಯವಾಗದ್ದನ್ನು ಓದಿದ್ದಾನೆ”**

**“ಬನ್ನಂಜೆಯನ್ನು ಅಲುಗಾಡಿಸಲು ಸಾಧ್ಯವಿಲ್ಲ”**

ಹೀಗೆ ಮೇಲಿಂದ ಮೇಲೆ ತನ್ನನ್ನು ತಾನು ಪಂಡಿತ ಪಂಡಿತ ಎಂದು ಹೊಗಳಿಕೊಳ್ಳುತ್ತಿರುತ್ತಾರೆ ಬನ್ನಂಜೆ. <u>**ಪಂಡಿತಂಮನ್ಯಮಾನಾಃ.**</u>

ಕೆಲವು ಮೂರ್ಖರು ಅವರ ಮುಂದೆ ಕುಳಿತು ಅವರು ಹೇಳಿದ್ದಕ್ಕೆಲ್ಲ ಸರಿಸರಿ, ಹೂಹೂ, ಎಂದು ಗೋಣಾಡಿಸುತ್ತಿರುತ್ತಾರೆ. ಇವತ್ತು ಬನ್ನಂಜೆಯ ಒಂದೊಂದು ದುರ್ವಾದಗಳೂ ಕತ್ತರಿಸಿಕತ್ತರಿಸಿ ಬೀಳುತ್ತಿದ್ದರೆ ಗೊಳೋ ಎಂದು ಊಳಿಡುತ್ತಿರುತ್ತಾರೆ.

ಸಮಸ್ತ ವೈಷ್ಣವಬಾಂಧವರಿಗೂ ಶ್ರೀನಿವಾಸಕಲ್ಯಾಣದ ಶುಭಾಶಯಗಳು. ಈ ಬಾರಿಯ ನನ್ನ ಶ್ರೀನಿವಾಸಕಲ್ಯಾಣದ ಆಚರಣೆಯ ಕ್ರಮವಿದು. ನಮ್ಮೊಡೆಯ ಮದುವೆಯಾದದ್ದೇ ಸುಳ್ಳು ಎಂದು ಹೇಳಿದವರು ಬದುಕಿದ್ದಾಗ ಅದಕ್ಕೆ ಉತ್ತರ ಕೊಡದೇ ಎಷ್ಟು ಮಹೋತ್ಸವ ಮಾಡಿದರೇನು? ಅದಕ್ಕಾಗಿ ವೈಶಾಖ ಶುದ್ಧ ದಶಮಿಯ ಈ ಶುಭದಿನದಂದು ಶ್ರೀನಿವಾಸಕಲ್ಯಾಣದ ಘಟನೆ ಸುಳ್ಳು ಎಂಬ ಬನ್ನಂಜೆಯ ದುರ್ವಾದವನ್ನು ಕತ್ತರಿಸಿ ಹಾಕಿ ಪದ್ಮಾವತೀಶ್ರೀನಿವಾಸರ ಮದುವೆಯನ್ನು

ಮಾಡಿದ್ದೇನೆ. ಆ ಶ್ರೀಭೂಸಮೇತನಾದ ಪದ್ಮಾವತೀವಲ್ಲಭನಾದ ನಮ್ಮ ತಿಮ್ಮಪ್ಪ ನಮ್ಮೆಲ್ಲರನ್ನು ಹರಸಲಿ.

ನಿಮಗೆಲ್ಲರಿಗೂ ಮಂಗಳವಾಗಲಿ.

— ವಿಷ್ಣುದಾಸ ನಾಗೇಂದ್ರಾಚಾರ್ಯ

